**ದಿನಾಂಕ: 20.11.2014 ರಂದು ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು**

**ಸಭೆಯಲ್ಲಿ ಹಾಜರಿದ್ದವರು :**

1. ಶ್ರೀ ಎ.ಕೆ.ಎಂ. ನಾಯಕ್, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು
2. ಶ್ರೀ ಡಿ.ತಂಗರಾಜ್, ರಾಜ್ಯ ಮಾಹಿತಿ ಆಯುಕ್ತರು
3. ಶ್ರೀ ಎಂ.ಆರ್.ಪೂಜಾರ್, ರಾಜ್ಯ ಮಾಹಿತಿ ಆಯುಕ್ತರು
4. ಶ್ರೀ ಟಿ. ರಾಮನಾಯಕ್, ರಾಜ್ಯ ಮಾಹಿತಿ ಆಯುಕ್ತರು
5. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮಾಹಿತಿ ಆಯುಕ್ತರು,
6. ಶ್ರೀ ಜಿ.ಸಿ. ವೃಷಭೇಂದ್ರಮೂರ್ತಿ, ಕಾರ್ಯದರ್ಶಿ
7. ಶ್ರೀ ಬಿ. ಶ್ರೀರಾಮರೆಡ್ಡಿ, ಕಾನೂನು ಅಧಿಕಾರಿ.

ಸಭೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

**1. ಆಯೋಗದಲ್ಲಿ ಅಗತ್ಯವಿರುವ ಡಿ.ಇ.ಓ. ಹುದ್ದೆಗಳನ್ನು ಮಂಜೂರು ಮಾಡುವ ಬಗ್ಗೆ.**

ಕರ್ನಾಟಕ ಮಾಹಿತಿ ಆಯೋಗದಲ್ಲಿ ಪ್ರಕರಣಗಳ ವಿಚಾರಣೆ ನಡೆಸುವ ಪೂರ್ವದಲ್ಲಿ ಸದರಿ ಪ್ರಕರಣಕ್ಕೆ ಸಂಬಂಧಿಸಿದ ಪ್ರತಿವಾದಿಗಳಿಗೆ ಮಾಹಿತಿ ಹಕ್ಕು ಕಾಯ್ದೆಯ ಅನುಸಾರ ಮಾಹಿತಿಯನ್ನು ಒದಗಿಸುವ ಸಂಬಂಧದಲ್ಲಿ ಆದೇಶಗಳನ್ನು ನೀಡಲು ಆಯೋಗವು ತೀರ್ಮಾನಿಸಿತು.

ಕಾರ್ಯದರ್ಶಿಗಳು, ಸದರಿ ಆದೇಶವನ್ನು ಪ್ರಕರಣಾನುಸಾರ ತಯಾರಿಸಲು ಹೆಚ್ಚುವರಿಯಾಗಿ ದತ್ತ ನಮೂದಕರ ಅವಶ್ಯಕತೆಯಿದ್ದು, ಅದರನ್ವಯ ದತ್ತ ನಮೂದಕರ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಅನುಮತಿ ಕೋರಿದರು.

ಆಯೋಗದಲ್ಲಿ ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ದತ್ತ ನಮೂದಕರನ್ನು, ದಿನಾಂಕ ನೀಡದೆ ಬಾಕಿ ಇರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಆದೇಶಗಳನ್ನು 'ಅಪ್‌ಲೋಡ್' ಮಾಡಲು ಮೊದಲು ಸೂಚನೆಗಳನ್ನು ನೀಡಿ ತದನಂತರ ಅವಶ್ಯಕತೆಗೆ ಅನುಸಾರವಾಗಿ ಹೊರಗುತ್ತಿಗೆ ಆದಾರದ ಮೇಲೆ ದತ್ತನಮೂದಕರನ್ನು ನೇಮಿಸಿಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿ ಮಂಜೂರಾತಿ ಪಡೆಯಲು ಕಾರ್ಯದರ್ಶಿಯವರಿಗೆ ಆಯೋಗ ಸೂಚಿಸಿತು.

ಕ್ರಮ : ಕಾರ್ಯದರ್ಶಿ, ಕ.ಮಾ.ಆ)

2. ಇತರೆ ವಿಷಯಗಳು :

1) **ತೀರ್ಪು ಬರಹಗಾರರ ಹುದ್ದೆಗಳನ್ನು ಸೃಜಿಸುವ ಕುರಿತು:** ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಮಾತನಾಡುತ್ತಾ, ಪ್ರಸ್ತುತ ಮಾಹಿತಿ ಆಯೋಗದಲ್ಲಿ ಇತ್ತೀಚಿನ ದಿನಗಳಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಸ್ವೀಕೃತವಾಗುತ್ತಿದ್ದು, ಕೋರ್ಟ್ ಹಾಲ್‌ಗಳಲ್ಲಿ ಕೆಲಸದ ಒತ್ತಡ ಹೆಚ್ಚಾಗಿರುವುದರಿಂದ ಪ್ರತಿದಿನ ಬೆಳಿಗ್ಗೆ ಮತ್ತು ಮಧ್ಯಾಹ್ನ ಪ್ರಕರಣವನ್ನು ತೆಗೆದುಕೊಳ್ಳಲಾಗುತ್ತಿದೆ. ಆದುದರಿಂದ ಪ್ರತಿ ಕೋರ್ಟ್ ಹಾಲ್‌ಗೆ ಒದಗಿಸಲಾಗಿರುವ ಇಬ್ಬರು ತೀರ್ಪು ಬರಹಗಾರರ ಹುದ್ದೆಯನ್ನು ಮೂರಕ್ಕೆ ಹೆಚ್ಚಿಸುವ ಅವಶ್ಯಕತೆಯನ್ನು ಅವರು ಒತ್ತಿ ಹೇಳಿದರು. ಇದನ್ನು ಎಲ್ಲಾ ಆಯುಕ್ತರು ಸಮರ್ಥಿಸುತ್ತಾ ಪ್ರತಿ ಕೋರ್ಟ್ ಹಾಲ್‌ಗೆ ಒಂದು ತೀರ್ಪು ಬರಹಗಾರರಂತೆ ಒಟ್ಟು ಏಳು ಕೋರ್ಟ್ ಹಾಲ್‌ಗಳಿಗೆ ಏಳು ತೀರ್ಪುಗಾರರ ಹುದ್ದೆಗಳನ್ನು ಸೃಜಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿ ಕೊಡುವಂತೆ ಕಾರ್ಯದರ್ಶಿಯವರಿಗೆ ಆಯೋಗ ಸೂಚಿಸಿತು.

ಕ್ರಮ : ಕಾರ್ಯದರ್ಶಿ, ಕ.ಮಾ.ಆ)

2) **ನ್ಯಾಯಾಲಯ ಸಭಾಂಗಣ ಮೂರು ಮತ್ತು ಐದರಲ್ಲಿ ಆಗುತ್ತಿರುವ ವಿದ್ಯುತ್ ಹಾಗೂ ಲಾನ್ ಸಮಸ್ಯೆ ಬಗ್ಗೆ:**

ರಾಜ್ಯ ಮಾಹಿತಿ ಆಯುಕ್ತರಾದ ಶ್ರೀ ಎಂ.ಆರ್.ಪೂಜಾರ್ ಅವರು ಮಾತನಾಡುತ್ತಾ ಮಿಥಿಕ್ ಸೊಸೈಟಿಯಲ್ಲಿರುವ ನ್ಯಾಯಾಲಯ ಸಭಾಂಗಣ-3 ಮತ್ತು 5ರಲ್ಲಿ ವಿದ್ಯುತ್ ಮತ್ತು ಅಂತರ್ಜಾಲ ಸಂಪರ್ಕದ ಸಮಸ್ಯೆ ತೀವ್ರವಾಗಿದ್ದು ಇದನ್ನು ಶೀಘ್ರವಾಗಿ ಪರಿಹರಿಸಬೇಕೆಂದು ಕೋರಿದರು.

ಈ ಬಗ್ಗೆ ಮಿಥಿಕ್ ಸೊಸೈಟಿಯಲ್ಲಿರುವ ನ್ಯಾಯಾಲಯ ಸಭಾಂಗಣಗಳಿಗೆ ಅನುಕೂಲವಾಗುವಂತೆ ಪ್ರತ್ಯೇಕವಾಗಿ ಪೋರ್ಟಬಲ್ ಯು.ಪಿ.ಎಸ್. ಅನ್ನು ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕಾರ್ಯದರ್ಶಿಯವರಿಗೆ ಆಯೋಗ ಸೂಚಿಸಿತು

ಕ್ರಮ : ಕಾರ್ಯದರ್ಶಿ, ಕ.ಮಾ.ಆ)

3) **ದಂಡ ಪಾವತಿ ಕುರಿತು** : ರಾಜ್ಯ ಮಾಹಿತಿ ಆಯುಕ್ತರಾದ ಶ್ರೀ ಡಿ.ತಂಗರಾಜ್ ಅವರು ಈ ಬಗ್ಗೆ ಪ್ರಸ್ತಾಪಿಸುತ್ತಾ, ಆಯೋಗದಲ್ಲಿ ವಿಚಾರಣೆ ಮಾಡುವ ಪ್ರಕರಣಗಳಿಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಮಾಹಿತಿ ನೀಡಲು ವಿಫಲರಾದವರ ಮೇಲೆ ವಿಧಿಸುವ ದಂಡ ಪಾವತಿಯಾಗದೆ ಪ್ರಕರಣಗಳನ್ನು ಮುಕ್ತಾಯಗೊಳಿಸುವಲ್ಲಿ ವಿಳಂಬವಾಗುತ್ತಿದ್ದು ಈ ಬಗ್ಗೆ ಕ್ರಮ ವಹಿಸಬೇಕೆಂದು ತಿಳಿಸಿದರು.

ಇದಕ್ಕೆ ಸ್ಪಂದಿಸಿದ ಮುಖ್ಯಮಾಹಿತಿ ಆಯುಕ್ತರು ಈಗಾಗಲೇ ಹಲವಾರು ಪ್ರಕರಣಗಳಲ್ಲಿ ದಂಡ ಪಾವತಿಸಿರುವ/ಕಟಾಯಿಸಿರುವ ಕುರಿತು ಚೆಲಾನ್‌ನ ಜೆರಾಕ್ಸ್ ಪ್ರತಿಯನ್ನು ಆಯೋಗದ ಕಾರ್ಯದರ್ಶಿಯವರಿಗೆ ಸಲ್ಲಿಸಲು ನಿರ್ದೇಶಿಸಿ ಪ್ರಕರಣಗಳನ್ನು ಮುಕ್ತಾಯಗೊಳಿಸುತ್ತಿರುವ ಅಂಶವನ್ನು ಅವರ ಗಮನಕ್ಕೆ ತಂದರು ಇಂತಹ ಆದೇಶದ ಒಂದು ಪ್ರತಿಯನ್ನು ಆಯೋಗದ ಕಾರ್ಯದರ್ಶಿಯವರಿಗೆ ಗುರುತಿಸಿರುವುದನ್ನು ಸಹ ಸಭೆಯ ಗಮನಕ್ಕೆ ತಂದರು.

ಪ್ರತಿ ತ್ರೈಮಾಸಿಕದ ಅಂತ್ಯದಲ್ಲಿ ಇನ್ನೂ ದಂಡ ವಸೂಲಾಗಬೇಕಾದ ಪ್ರಕರಣಗಳ ಪಟ್ಟಿಯನ್ನು ತಯಾರಿಸಿ ಸಂಬಂಧಿಸಿದ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ/ಇಲಾಖಾ ಮುಖ್ಯಯಸ್ಥರಿಗೆ ಒಂದು ಅರೆ ಸರ್ಕಾರಿ ಪತ್ರದ ಮೂಲಕ ಮುಖ್ಯ ಮಾಹಿತಿ ಆಯುಕ್ತರ ಸಹಿಯಲ್ಲಿ ಕಳುಹಿಸಿಕೊಡಲು ಏರ್ಪಡಿಸುವಂತೆ ಆಯೋಗ ಕಾರ್ಯದರ್ಶಿಯವರಿಗೆ ಸೂಚಿಸಿತು.

ಕ್ರಮ : ಎಲ್ಲಾ ಆಯುಕ್ತರುಗಳು ಮತ್ತು ಕಾರ್ಯದರ್ಶಿಗಳು, ಕ.ಮಾ.ಆ)

**4) ದಂಡ ಪಾವತಿಸಬೇಕಾಗಿರುವ/ಕಟಾಯಿಸಬೇಕಾಗಿರುವ ಪ್ರಕರಣಗಳ ಪಟ್ಟಿಯನ್ನು ಆಯೋಗ ವೆಬ್-ಸೈಟ್‌ನಲ್ಲಿ ಪ್ರಕಟಿಸುವ ಬಗ್ಗೆ.**

ವಿಷಯನ್ನು ಚರ್ಚಿಸಿದ ನಂತರ ವಿಷಯ-3ರಲ್ಲಿ ತೀರ್ಮಾನಿಸಿರುವಂತೆ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ /ಕಾರ್ಯದರ್ಶಿ/ ಇಲಾಖಾ ಮುಖ್ಯಸ್ಥರುಗಳಿಗೆ ತ್ರೈಮಾಸಿಕವಾಗಿ ಕಳುಹಿಸಲಾಗುವ ಪ್ರಕರಣಗಳ ಪಟ್ಟಿಯನ್ನು ಆಯೋಗದ ವೆಬ್-ಸೈಟ್‌ನಲ್ಲಿಯೂ ಸಹ ಪ್ರಕಟಿಸಲು ಕ್ರಮ ತೆಗೆದುಕೊಳ್ಳುವಂತೆ ಆಯೋಗ ಕಾರ್ಯದರ್ಶಿಯವರಿಗೆ ಸೂಚಿಸಲಾಯಿತು.

ಕ್ರಮ: ಎಲ್ಲಾ ಆಯುಕ್ತರುಗಳು ಮತ್ತು ಕಾರ್ಯದರ್ಶಿ, ಕ.ಮಾ.ಆ)

**5) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿ.ಬಿ.ಎಂ.ಪಿ) ಕಛೇರಿಗಳಲ್ಲಿ ಆಯೋಗದ ಪ್ರಕರಣಗಳ ವಿಚಾರಣೆ ನಡೆಸುವ ಬಗ್ಗೆ:**

ಹೆಚ್ಚಿನ ಸಂಖ್ಯೆಯಲ್ಲಿ ಹಾಗು ತ್ವರಿತವಾಗಿ ಬಾಕಿ ಇರುವ ಪ್ರಕರಣಗಳ ವಿಲೇವಾರಿ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಛೇರಿಗಳಲ್ಲಿ ಅಂದರೆ ಮುಖ್ಯ ಅಭಿಯಂತರರ ಕಛೇರಿಯಲ್ಲಿ, ಮುಖ್ಯ ಆರೋಗ್ಯ ಅಧಿಕಾರಿಯವರ ಕಛೇರಿಯಲ್ಲಿ ಹಾಗೂ ಜಂಟಿ ಆಯುಕ್ತರವರ ಕಛೇರಿಯಲ್ಲಿ ಪ್ರಾಯೋಗಿಕವಾಗಿ ಆಯೋಗದ ವಿಚಾರಣೆಗಳನ್ನು ನಡೆಸಿ ನೋಡಬಹುದೆಂದು ಸಭೆಯಲ್ಲಿ ಅಭಿಪ್ರಾಯ

ವ್ಯಕ್ತ ಪಡಿಸಲಾಯಿತು. ಈ ಕುರಿತು ಕಾರ್ಯದರ್ಶಿಯವರು ಸಂಬಂಧಿಸಿದ ಎಲ್ಲಾ ಕಛೇರಿಗಳಿಗೆ ಬೇಟಿ ನೀಡಿ ಆಯೋಗದ ವಿಚಾರಣೆ ನಡೆಸಲು ಅಗತ್ಯ ಇರುವ ಅನುಕೂಲತೆಯನ್ನು ಪರಿಶೀಲಿಸುವಂತೆ ಆಯೋಗ ಸೂಚಿಸಿತು. ನಂತರ ವಿಷಯವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರೊಂದಿಗೆ ಸಮಾಲೋಚಿಸಿ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಬಹುದೆಂದು ಆಯೋಗ ತೀರ್ಮಾನಿಸಿತು.

ಕ್ರಮ: ಕಾರ್ಯದರ್ಶಿ, ಕ.ಮಾ.ಆ)

6) **ಕಾನೂನು ಅಧಿಕಾರಿಯವರ ಮೇಲ್ವಿಚಾರಣೆಯಲ್ಲಿ ಕಾನೂನು ಸಹಾಯಕರು ಕಾರ್ಯನಿರ್ವಹಿಸುವ ಬಗ್ಗೆ:**

ಆಯೋಗದಲ್ಲಿ ಕೆಲಸ ಮಾಡುತ್ತಿರುವ ಕಾನೂನು ಸಹಾಯಕರು, ಕಾನೂನು ಅಧಿಕಾರಿಯವರ ನೇರ ನಿಯಂತ್ರಣ ಹಾಗೂ ಮೇಲ್ವಿಚಾರಣೆಯಲ್ಲಿ ಕೆಲಸ ಮಾಡುವುದು ಸೂಕ್ತವೆಂದು ಆಯೋಗ ಅಭಿಪ್ರಾಯ ಪಟ್ಟಿದ್ದು ಅದರಂತೆ ಕಛೇರಿ ಆದೇಶ ಹೊರಡಿಸಲು ಕಾರ್ಯದರ್ಶಿಯವರಿಗೆ ಸೂಚಿಸಲಾಯಿತು.

ಕ್ರಮ: ಕಾರ್ಯದರ್ಶಿ, ಕ.ಮಾ.ಆ)

ಈ ಸಭೆಯಲ್ಲಿ ತೀರ್ಮಾನಿಸಿದ ವಿಷಯಗಳ ಬಗ್ಗೆ ಕೂಡಲೇ ಕ್ರಮವಹಿಸುವಂತೆ ಕಾರ್ಯದರ್ಶಿಗಳಿಗೆ ಸೂಚನೆ ನೀಡಿ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು